

ನೀಡಲಾಗದು ಎಂದು ವಾದಿಸಿ, ಸರ್ಕಾರವು ಆ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತು. ಹತ್ತು ವರ್ಷಗಳ ನಂತರ ಈಗ, ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್ ಕೂಡ ಎತ್ತಿ ಹಿಡಿದಿದೆ.

## ಸುಪ್ರೀಂ ಕೋರ್ಟಿನ ತೀರ್ಪು

ತ್ರಿಮೂರ್ತಿಗಳಿಂದಲೂ ವಧಿಸಲಾಗದ ರಕ್ಕಸರನ್ನು ಮರ್ದಿಸಿದ ದೇವತೆಯಾಗಿ ದುರ್ಗೆ, ಚಂಡಿ, ಚಾಮುಂಡಿ, ಭೈರವಿ ಎಂದು ಹೆಣ್ಣಿನ ರೌದ್ರಾವತಾರವನ್ನು ಪೂಜಿಸುವ ಸಮಾಜ, ಗುಡಿಯ ಹೊರಗೆ ಮೂಲತಃ ಪುರುಷ ಪ್ರಧಾನವಾಗಿಯೇ ಉಳಿದಿದೆ. ಪುರುಷರ ಕೈಯಲ್ಲಿರುವ ಅಧಿಕಾರ ಮಹಿಳೆಯರು ಸದಾ ಅವಕಾಶವಂಚಿತರಾಗುವಂತೆ ನೋಡಿಕೊಂಡಿದೆ.

ಈ ಹಿನ್ನೆಲೆಯಲ್ಲಿ, ಫೆಬ್ರುವರಿ 17, 2020ರಂದು ಭಾರತೀಯ ಸೇನೆಯಲ್ಲಿ ಮಹಿಳಾ ಅಧಿಕಾರಿಗಳ ಅವಕಾಶಗಳಿಗೆ ಇದ್ದ ಮಿತಿಯನ್ನು ತೆಗೆದುಹಾಕುವ ಮಹತ್ವದ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಿದೆ. ಈ ಚಾರಿತ್ರಿಕ ತೀರ್ಪು ಸ್ವಾಗತಾರ್ಹ. ಕಮಾಂಡ್ ಹುದ್ದೆಗಳ ನಾಯಕತ್ವದ ಸ್ಥಾನ ನೇಮಕದಲ್ಲಿ ಮಹಿಳೆಯರಿಗೂ ಅವಕಾಶ ಇರಬೇಕು ಎಂದು ತೀರ್ಪು ಹೇಳುತ್ತದೆ. ಸ್ತ್ರೀ ಸಬಲೀಕರಣ ಮತ್ತು ಸಮಾನತೆಯ ಹಾದಿಯಲ್ಲಿ ಇಟ್ಟ ಗುರುತರ ಹೆಜ್ಜೆ ಇದು.

‘ಮಹಿಳೆಯರು ಎಂಬ ಒಂದೇ ಕಾರಣಕ್ಕೆ ಸಾರಾಸಗಟಾಗಿ ಈ ಹುದ್ದೆಗಳನ್ನು ನಿರಾಕರಿಸುವುದಕ್ಕೆ ಯಾವ ಸಮರ್ಥನೆಯೂ ಇಲ್ಲ ಮತ್ತು ಇದು ಲಿಂಗ ತಾರತಮ್ಯದ ನಡೆ’ ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಅಜಯ್ ರಸ್ತೊಗಿ ಅವರನ್ನು ಒಳಗೊಂಡ ನ್ಯಾಯಪೀಠ ಹೇಳಿದೆ.

ಸಾಮಾಜಿಕ ಕಟ್ಟುಪಾಡು, ಕೌಟುಂಬಿಕ ಜವಾಬ್ದಾರಿ, ದೈಹಿಕ ಇತಿಮಿತಿಗಳನ್ನು ಲೆಕ್ಕಾಚಾರ ಹಾಕಿ, ದುರ್ಬಲತೆಗೆ ಹೋಲಿಸಿ ಮಹಿಳಾ ಅಧಿಕಾರಿಗಳನ್ನು ಸೀಮಿತಗೊಳಿಸುವ ಕೇಂದ್ರ ಸರ್ಕಾರದ ನಿಲುವಿನ ಬಗ್ಗೆ ನ್ಯಾಯಪೀಠವು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಅಲ್ಲದೆ, ಸೇನೆಯಲ್ಲಿ ಪುರುಷ ಅಧಿಕಾರಿಗಳಿಗೆ ಸಮನಾಗಿ ಮಹಿಳಾ ಅಧಿಕಾರಿಗಳಿಗೆ ಏಕೆ ಅವಕಾಶ ನೀಡುತ್ತಿಲ್ಲ ಎಂದು ಪ್ರಶ್ನಿಸಿದೆ.

ಮಹಿಳಾ ಅಧಿಕಾರಿಗಳನ್ನು ಕಾಯಂ ಸೇವೆಗೆ ನಿಯೋಜಿಸುವ ನಿರ್ಧಾರವನ್ನು ಕೇಂದ್ರವು 2019ರಲ್ಲಿಯೇ ಕೈಗೊಂಡಿತ್ತು. ಆದರೆ, ಗರ್ಭಧಾರಣೆ, ತಾಯ್ತನ, ಕುಟುಂಬದ ಜವಾಬ್ದಾರಿಗಳು, ದೈಹಿಕ ಮಿತಿಗಳು, ವಾಸ್ತವ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ಕೊರತೆ ಮುಂತಾದವು ಮಹಿಳೆಯರ ಕಾಯಂ